OS 158/2021
PW-3

ದಿನಾಂಕಃ27-05-2024 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿವೆ.

ನನ್ನ ದಾವೆಗೆ ಪೂರಕವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗೆ ಒಳಪಡಿಸಲು ವಿನಂತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೆ ಒಳಪಡಿಸಲಾಯಿತು.

ಸಾಕ್ಷಿಗೆ ಈಗ ನಿಪಿ-1 ರ ಪುಟ ಸಂಖ್ಯೆ 2 ರಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಸಹಿಯನ್ನು ನೋಡಿ ಒಪ್ಪಿ ಸದರಿ ಸಹಿ ತನ್ನದೇ ಎಂದು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-1 (ಡಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಅರ್ ವಕೀಲರಿಂದಃ .

ನನಗೆ ಬೆರಳಚ್ಚು ಮಾಡಲು ಬರುವುದಿಲ್ಲ.ನಿಪಿ–1 ರಲ್ಲಿ ನಮೂದು ಇರುವ ಟೈಪಿಂಗ್‌ನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಜಮೀನಿನ ಕ್ರಯದ ವ್ಯವಹಾರದ ಮಾತುಕತೆ ನಡೆದಿರುವುದಿಲ್ಲ, ನಿಪಿ–1 ರ ದಿನಾಂಕ ನನಗೆ ಗೊತ್ತಿಲ್ಲ. ನಿಪಿ–1 ರ 2 ನೇ ಪುಟದ ಕೊನೆಯಲ್ಲಿ ಸಾಕ್ಷಿಗಳು ಎಂದು ನಮೂದಿನ ಕೆಳಗೆ 3 ಮತ್ತು 4 ಎಂದು ಕ್ರಮ ಸಂಖ್ಯೆ ನಮೂದು ಇದ್ದು ಸದರಿ ಸಂಖ್ಯೆಗಳ ಮುಂದೆ ಖಾಲಿ ಇದೆ ಎಂದರೆ ಸರಿ. ನಿಪಿ–1 ರ ದಿನಾಂಕದಂದು ವಾದಿ ಮತ್ತು ಪ್ರತಿವಾದಿಗಳ ನಡುವಿನ ವ್ಯವಹಾರದ ಕುರಿತು ನಾನು ಆಧಾರ ಪತ್ರವನ್ನು ಮಾಡಿರುತ್ತೇನೆ. ಸದರಿ ಆಧಾರ ಪತ್ರದ ಒಕ್ಕಣೆಕೆಯನ್ನು ನಿಪಿ–1 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಸದರಿ ಆಧಾರಪತ್ರವನ್ನು ರೂ.10,000/–ಗಳಿಗೆ ಮಾಡಲಾಗಿರುತ್ತದೆ. ಸದರಿ ಆಧಾರ ಪತ್ರದ ದಿನಾಂಕದಂದೇ ಕ್ರಯಪತ್ರವನ್ನು ಮಾಡಿಕೊಳ್ಳಲು ತೊಂದರೆಯಿತ್ತೆ ಎಂದರೆ ಸಾಕ್ಷಿ 15 ವರ್ಷಗಳವರೆಗೆ ಪರಭಾರೆ ಮಾಡಬಾರದು ಎಂಬ ಷರತ್ತು ಇದ್ದ ಮೇರೆಗೆ ಸದರಿ ದಿನಾಂಕದಂದೇ ಕ್ರಯಪತ್ರ ವನ್ನು ಬರೆಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ರಲ್ಲಿ ಸದರಿ ವಿಚಾರದ ಕುರಿತು ಉಲ್ಲೇಖವಿಲ್ಲ ಎಂದರೆ ಸರಿ. ಆಧಾರಪತ್ರದಲ್ಲಿಯೂ ಸಹ ಸದರಿ ವಿಚಾರವನ್ನು ನಮೂದಿಸಿರುವುದಿಲ್ಲ.

OS 158/2021
PW-3

ದಿಃ12–12–1990 ರಂದು ಪ್ರತಿವಾದಿ ಆಧಾರಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಮತ್ತು ವಾದಿ ಅಕ್ಕಪಕ್ಕದ ಗ್ರಾಮಸ್ಥರಾಗಿದ್ದು ವಿಶ್ವಾಸಿಗರು ಎಂದರೆ ಸರಿ. ನಿಪಿ–1 ನ್ನು ಈ ದಾವೆ ಹೂಡುವ ಸಮಯಕ್ಕೆ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪತ್ರಬರಹಗಾರನಾಗಿ ಸಹಿ ಮಾಡಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.ನನ್ನ ಸಮಕ್ಷಮ ಯಾವುದೇ ಹಣವನ್ನು ಕೊಡುವುದು ತೆಗೆದುಕೊಳ್ಳುವುದು ಮಾಡಿರುವುದಿಲ್ಲ. ನಾನು ವಾದಿಯ ಕೋರಿಕೆ ಮೇರೆಗೆ ಮತ್ತು ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ದೈನಂದಿನ ಕರ್ತವ್ಯವನ್ನು ನಿರ್ವಹಿಸಿದ ಬಗ್ಗೆ ವಹಿಯನ್ನು ನಿರ್ವಹಿಸಬೇಕಾಗಿದ್ದು ನಿಪಿ–1 ರ ದಾಖಲೆ 30 ವರ್ಷ ಹಳೆಯದಾದ ಕಾರಣ ನನ್ನ ಬಳಿ ಯಾವುದೇ ದಾಖಲೆಯಾಗಲಿ ಅಥವಾ ವಹಿಯಾಗಲಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ನಿಪಿ–1 ರ ವ್ಯವಹಾರದ ಕುರಿತು ನನ್ನ ಬಳಿ ದಾಖಲೆ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ. ಸದರಿ ವಹಿಯಲ್ಲಿ ಆಧಾರಪತ್ರದ ವ್ಯವಹಾರದ ಕುರಿತು ನಮೂದು ಇದ್ದು ಸದರಿ ವಹಿ ನನ್ನ ಬಳಿ ಇರುವುದಿಲ್ಲ. ಸದರಿ ವಿಚಾರದ ಕುರಿತು ನಾನು ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನನ್ನ ಪ್ರಮಾಪತ್ರದಲ್ಲಿ ಬರೆದ ಸಂಗತಿಗಳ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಹಾಗಾಗಿ ನಾನು ವಾದಿಗೆ ಅನುಕೂಲ ಮಾಡಿಕೊಡಲು ಆತನ ಹೇಳಿಕೆಗೆ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ,.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.